

ಶೇ ಮೊನಸ್ಟರಿ ಮತ್ತು ಅರಮನೆ



ಡಿಸ್ಕಿಟ್ ಮೊನಸ್ಟರಿ

ತಾಮ್ರದ ಬುದ್ಧನ ಪ್ರತಿಮೆ, ವರ್ಣ ಚಿತ್ರಗಳು, ಚಿನ್ನ ಮತ್ತು ಬೆಳ್ಳಿಯ ಸ್ತೂಪಗಳು, ಭಿತ್ತಿ ಚಿತ್ರಗಳು, ತಂಕಾ (ಹತ್ತಿ ಅಥವ ರೇಷ್ಮೆ ಬಟ್ಟೆಯಲ್ಲಿ ಬರೆದ ಬೌದ್ಧ ಚಿತ್ರ ಕಲೆ), ಹಸ್ತ ಪ್ರತಿಗಳು ಶ್ರೀಮಂತ ಸಂಸ್ಕೃತಿಯ ಇತಿಹಾಸವನ್ನು ನೆನಪಿಸುತ್ತದೆ. ಜೂನ್–ಜುಲೈಯಲ್ಲಿ ನಡೆಯುವ ಹೆಮೀಸ್ ಉತ್ಸವದಲ್ಲಿ ಪ್ರಸಿದ್ಧ ಮುಖವಾಡ ನೃತ್ಯ ನಡೆಯುತ್ತದೆ.

**ಶೇ ಗೋಂಪ ಮತ್ತು ಅರಮನೆ:** ಲಡಾಕಿನ ರಾಜ ಡೆಲ್ಡನ್ ನಾಮಗ್ಯಾಲ್ 17ನೇಯ ಶತಮಾನದಲ್ಲಿ ಶೇ ಅರಮನೆ, ಕೋಟೆ ಮತ್ತು ಮೊನಸ್ಟರಿಯನ್ನು ಕಟ್ಟಿಸಿದ. ಹಿಂದೊಮ್ಮೆ ಶೇ ಲಡಾಕಿನ ಬೇಸಿಗೆಯ ರಾಜಧಾನಿಯಾಗಿತ್ತು. ಲೇಹ್‌ನಿಂದ 15 ಕಿ.ಮೀ ದಕ್ಷಿಣದಲ್ಲಿ ಮನಾಲಿ ರಸ್ತೆಯಲ್ಲಿದೆ. ಅರಮನೆಯ ಸುತ್ತಲೂ ನೂರಾರು ಸ್ತೂಪಗಳಿವೆ. ಮೂರು ಮಾಳಿಗೆಯ ಎತ್ತರಕ್ಕೆ ಇರುವ 12 ಮೀಟರ್ ಎತ್ತರದ ತಾಮ್ರದ ಶಕ್ಯಮುನಿ ಬುದ್ಧನೇ ಇಲ್ಲಿನ ವಿಶೇಷ.

ಈ ಬುದ್ಧನ ಮೂರ್ತಿಯ ಪಕ್ಕದ ಎರಡೂ ಗೋಡೆಗಳಲ್ಲಿ ನಿರ್ವಾಣ ಹೊಂದಿದ ಬೌದ್ಧ ಸನ್ಯಾಸಿಗಳ ಚಿತ್ರಣವಿದೆ. ಬುದ್ಧನ ಮೂರ್ತಿಯ ಎದುರು ಬೆಣ್ಣೆಯ ನಂದಾ ದೀಪವಿದೆ. ಸದಾ ಬೆಳಗುವ ದೀಪದಿಂದಾಗಿ ಸುತ್ತ ಮಸಿ ತುಂಬಿಕೊಂಡಿದೆ. ಕೆಳ ಅಂತಸ್ಥಿನಲ್ಲಿ ಪವಿತ್ರ ಹಸ್ತ ಪ್ರತಿಗಳಿದ್ದರೆ, ಮಧ್ಯದ ಅಂತಸ್ಥಿನಲ್ಲಿ ವಿವಿಧ ಮುದ್ರೆಯಲ್ಲಿರುವ ಬುದ್ಧನ ಮೂರ್ತಿಗಳಿವೆ. ಅರಮನೆಯ ಸುತ್ತಲೂ ಅಳಿದು ಉಳಿದಿರುವ ಕೋಟೆಯನ್ನು ನೋಡಬಹುದು.

**ಸ್ಪಿತುಕ್ ಗೋಂಪ:** ಲೇಹ್‌ನಿಂದ ಕೇವಲ 7 ಕಿ.ಮೀ ದೂರಲ್ಲಿರುವ ಇದನ್ನು 11ನೇ ಶತಮಾನದಲ್ಲಿ ಓಡ್–ಓಡಿ ಎಂಬಾತ ಸ್ಥಾಪಿಸಿದ. 3300 ಮೀಟರ್ ಎತ್ತರದಲ್ಲಿರುವ ಮೊನಸ್ಟರಿಯಲ್ಲಿ ಅಂದಾಜು 100 ಬೌದ್ಧ ಸನ್ಯಾಸಿಗಳಿದ್ದಾರೆ. ಅತೀ ದೊಡ್ಡ ಕಾಳಿ ಮೂರ್ತಿಯಿದ್ದರೂ ಅದರ ದರ್ಶನ ಸಾರ್ವಜನಿಕರಿಗೆ ವರ್ಷಕ್ಕೊಮ್ಮೆ ನಡೆಯುವ ಸ್ಪಿತುಕ್ ಉತ್ಸವದಂದು ಮಾತ್ರ. ಮ್ಯೂಸಿಯಂನಲ್ಲಿ ಬೆಲೆ ಬಾಳುವ ಪುರಾತನ ಮುಖವಾಡಗಳು, ಪುರಾತನ ಶಸ್ತ್ರಾಸ್ತ್ರ, ಚಿಹ್ನೆಗಳು ಹಾಗೂ ಪೈಂಟಿಂಗ್‌ಗಳಿವೆ. ಆಕರ್ಷಕ ಒಳಾಂಗಣ ವಿನ್ಯಾಸ. ಮಣ್ಣಿನ ಇಟ್ಟಿಗೆಯಿಂದ ಕಟ್ಟಿದ ಈ ಕಟ್ಟಡವನ್ನು ಹೊರಗಿನ ಮೆಟ್ಟಿಲಿನಿಂದ ಮೇಲೇರಿದರೆ ಸುಂದರ ದೃಶ್ಯ ಕಾಣಸಿಗುತ್ತದೆ. ಎರಡು ದಿನದ 'ಗಸ್ಟರ್ ಉತ್ಸವ' ದಲ್ಲಿ ಸ್ಥಳೀಯ ಸಂಸ್ಕೃತಿಯ ಅನಾವರಣವಿದೆ.

**ಡಿಸ್ಕಿಟ್ ಮೊನಸ್ಟರಿ:** ಲೇಹ್‌ನಿಂದ 150 ಕಿ.ಮೀ ದೂರದಲ್ಲಿರುವ ನುಬ್ರ ಕಣಿವೆಯಲ್ಲಿರುವ ಈ ಮೊನಸ್ಟರಿ, 14ನೇ ಶತಮಾನದ ಅತ್ಯಂತ ಪುರಾತನ ಗೃಹ. ಪ್ರಾರ್ಥನೆಯ ಸಭಾಂಗಣದಲ್ಲಿ ಕಿರೀಟಧಾರಿ ಬುದ್ಧ, ದೊಡ್ಡ ಡ್ರಮ್ ಮತ್ತು ಉಗ್ರ ರಕ್ಷಕ ದೇವತೆಗಳ ಮೂರ್ತಿಗಳು ಗಮನ ಸೆಳೆಯುತ್ತವೆ. ಫೆಬ್ರುವರಿ ತಿಂಗಳಲ್ಲಿ ಭಾರೀ ಚಳಿಯಲ್ಲಿ ಇಲ್ಲಿನ ಉತ್ಸವ ನಡೆಯುತ್ತದೆ. 32 ಮೀಟರ್ ಎತ್ತರದ ಸುಂದರ ಮೈತ್ರೇಯ ಬುದ್ಧನ ಪ್ರತಿಮೆ ಇಲ್ಲಿನ ಪ್ರಮುಖ ಆಕರ್ಷಣೆ. ಇಲ್ಲಿಗೆ ತಲುಪಲು ಲೇಹ್‌ನ ಅತ್ಯಂತ ಎತ್ತರದ ರಸ್ತೆ ಮಾರ್ಗವಾದ ಖರ್ದುಂಗ್ ಲಾ ಪಾಸ್ ನ್ನು ದಾಟಬೇಕು.

**ಶಾಂತಿ ಸ್ತೂಪ:** ಇದು ಮೊನಸ್ಟರಿಯಲ್ಲ, ಜಪಾನೀಯರು ಪ್ರಪಂಚದ ಶಾಂತಿಗೋಸ್ಕರ ಕಟ್ಟಿಸಿದ ಸ್ತೂಪ. ದಲೈ ಲಾಮ 1991ರಲ್ಲಿ ಉದ್ಘಾಟಿಸಿದರು. ಸ್ತೂಪವು ಎರಡು ಹಂತದಲ್ಲಿದ್ದು, ಮೊದಲ ಹಂತದಲ್ಲಿ ಧರ್ಮಚಕ್ರದ ಮೇಲೆ ಕೂತಿರುವ ಬುದ್ಧನಿದ್ದರೆ, ಎರಡನೆಯ ಹಂತದಲ್ಲಿ ಬುದ್ಧನ ಹುಟ್ಟು ಮತ್ತು ನಿರ್ವಾಣದ ರಚನೆಗಳಿವೆ. ಸ್ತೂಪದ ಮೇಲೆ ನಿಂತಾಗ 360 ಡಿಗ್ರಿಯಲ್ಲೂ ಲೇಹ್ ನಗರ ಮತ್ತು ಪ್ರಕೃತಿಯ ವಿಹಂಗಮ ನೋಟ ಸಿಗುತ್ತದೆ. ಸೂರ್ಯಾಸ್ತ ಮತ್ತು ಸೂರ್ಯೋದಯ ವೀಕ್ಷಣೆಗ ಹೇಳಿ ಮಾಡಿಸಿದ ಸ್ಥಳ. ರಾತ್ರಿ ಸ್ತೂಪವನ್ನು ದೀಪಗಳಿಂದ ಬೆಳಗಿಸಲಾಗುವುದು.